ಆ) ಹಾಗಿದ್ದರೆ, ಸರ್ಕಾರವು ಆಂಗನವಾಡಿಗಳನ್ನು ತೆರೆಯಲು ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆ) ಹೌದು.

ಆ) ಭಾರತ ಸರ್ಕಾರವೇ ಬಾಲವಿಕಾಸ ಯೋಜನೆಗಳನ್ನು ಮಂಜೂರು ಮಾಡಬೇಕಾಗಿರುವುದರಿಂದ ಕುಂದಗೋಳ ತಾಲ್ಲೂಕು ಸೇರಿದಂತೆ ಯೋಜನೆಗಳಿಲ್ಲದ ಎಲ್ಲ ತಾಲ್ಲೂಕುಗಳ ವಿವರಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರ ಮಂಜೂರು ಮಾಡಿದಾಗ ಕುಂದಗೋಳ ತಾಲ್ಲೂಕಿನಲ್ಲಿಯೂ ಆಂಗನವಾಡಿಗಳನ್ನು ತೆರೆಯಲಾಗುವುದು.

ಶ್ರೀ ಬಿ. ಎ. ಉಪ್ಪಿನ್.—ಬೇಗ ಮಂಜೂರಾತಿ ತರಿಸಿಕೊಂಡು ಇದನ್ನು ಪ್ರಾರಂಭಮಾಡಿ.

ಶ್ರೀ ಜಿ. ಬಸವಣ್ಣಪ್ಪ.—ಆಗಬಹುದು.

ಪಂಚಾಯಿತ ದಾವೆಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ನಿಯಮಾವಳಿಗಳು

೯೦೪ (ವಿಟಿಸಿ) ಶ್ರೀ ಎಂ. ಎಲ್. ಉಸ್ತಾದ್, (ಬಿಜಾಪುರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಹಕಾರ ಇಲಾಖೆಯಲ್ಲಿ ಪಂಚಾಯತ್ ದಾವೆಗಳನ್ನು ಇತ್ಯರ್ಥಕ್ಕಾಗಿ ಮಧ್ಯಸ್ಥಗಾರರಿಗೆ ಪಹಿಸಲು ನಿಯಮಾವಳಿಗಳೇನಾದರೂ ಇವೆಯೇ ?

ಆ) ಹಾಗಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು?

ಇ) ಇಲ್ಲವಾದಲ್ಲಿ ನಿಯಮಾವಳಿಗಳನ್ನು ರೂಪಿಸಲು ಸರ್ಕಾರವು ಕ್ರಮ ಕೈ ಗೊಳ್ಳುವುದೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಹೌದು. ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೭೧ ಹಾಗೂ ಸಹಕಾರಿ ಸಂಘಗಳ ನಿಯಮ ೩೧(೩) ರನ್ವಯ ಮಧ್ಯಸ್ಥಗಾರರಿಗೆ ಪಂಚಾಯತ್ ದಾವೆಗಳನ್ನು ಇತ್ಯರ್ಥಕ್ಕಾಗಿ ಪಹಿಸಲಾಗುತ್ತಿದೆ.

ಆ) ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೭೧ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮ ೧೯೬೦ ನಿಯಮ ೩೧(೩)ರ ಉದ್ಧೃತ ಭಾಗವನ್ನು ಲಗತ್ತಿಸಿದೆ.

ಇ) ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

Extracts from Section 71 of the Karnataka Co-operative Societies Act, 1959 and rule 31(3) of KCS Rules, 1960.

71. Disposal of Disputes - (1) The Registrar may on receipt of the reference of a dispute under section 70.

a) decide the dispute himself, or

b) transfer it for disposal to any person who has been invested by the State Government with powers in that behalf of

c) refer it for disposal to one arbitrator appointed by the Registrar.

2) The Registrar may withdraw any reference transferred under clauses (b) of sub-sections (1) or referred under clause(c) of that sub-section and decide it himself.

3) The Registrar on any other person to whom a dispute is referred for decision under this section may, pending the decision of the dispute, make such interlocutory orders as he may deem necessary in the interests of justice.

(33A) When a dispute is referred to an arbitrator under clause (c) of sub-section (1), the award shall, subject to such rules as may be prescribed, include the fee payable to the arbitrator and the fees and expenses payable to the Registrar. Such an award shall not be invalid merely on the ground that it was made after the expiry of the period fixed for deciding the dispute by the Registrar, and shall, subject to appeal or revision, be binding on the parties to the dispute.

(4) Not with standing anything contained in section 70 when any dispute under clause (a) or (b) of sub-section (1) of the said section is referred for decision to the Registrar, and Registrar is satisfied on an application by the society concerned that in the interest of the dispute it is necessary to implead persons who cannot be made parties to the dispute procedings before him he may permit the socitey to institute a regular suit in a Civil Court having jursisdiction and the Civil Court shall be competent to entertain such suit.

Rule 31(3) :

Where on receipt of a reference under sub-rule (1) the Registrar decides under clauses (c) of sub-section (2) of section 71 to refer it for disposal by arbitration. The reference shall be made to an Arbitrator appointed by the Registrar.

ಶ್ರೀ ಎಂ. ಎಲ್. ಉಸ್ತಾದ್....ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದು ಪ್ರಶ್ನೆಯೇ ಬೇರೆ ಇವರು ಉತ್ತರ ಕೊಟ್ಟಿರುವುದೇ ಬೇರೆ. ಏಕೆಂದರೆ Under Section 71 of the Karnatka Co-operatives Societies Act 1959 and Rule 31(3) of the Co-operative Societies Rules 1960 ಪ್ರಕಾರ ರೆಫರ್ ಮಾಡುವುದು ಬೇರೆ. ನಾನು ಕೇಳಿದ್ದು so far as entrusting of arbitration cases to arbitrators in the Co-operation Department. ಏಕೆಂದರೆ ರೆಫರ್ ಮಾಡುವುದು ನನಗೆ ಗೊತ್ತು. ಐದು ವರ್ಷಗಳಿಂದ ನಾನು ಆರ್ಬಿಟ್ರೇಟರ್ ಆಗಿ ಕೆಲಸಮಾಡಿದ್ದೇನೆ. ಆದರೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಇದರಲ್ಲಿ ಆರ್ಬಿಟ್ರೇಟರ್ಸ್ ಹೆಚ್ಚಿಗೆ ಇರುವುದು ಎಂದರೆ ನಮ್ಮ ವಕೀಲಮಂದಿ. ೯೮ ರಿಂದ ೯೯ ಪರ್ಸೆಂಟ್ ನಮ್ಮ ವಕೀಲರೇ ಆರ್ಬಿಟ್ರೇಟರ್ಸ್ ಇರುತ್ತಾರೆ. ನಾನು ಕೇಳಿದ್ದು So far as entrusting of the arbitration cases from the Assistant Registrar of Co-operative Societies, Deputy Registrar of Co-operative Societies, Registrar of Co-operative Societies are concerned, are there any rules and regulations ? I would like to know. ಅದು ಇಲ್ಲ ನಾನು ತಮ್ಮ ಮುಖೇನ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ರೆಫರಿಂಗ್ ಎಂಟ್ರುಸ್ಟ್ ಮಾಡುತ್ತೇವೆ ; from the Asst. Registrar of Co-operative Societies & from the Dy. Registrar of Co-operative Societies ; ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ. ಬಹಳವಾಗಿ ಅವ್ಯವಹಾರ ನಡೆದಿದೆ, ಒಂದು

ಬಾರ್ ಅಸೋಸಿಯೇಷನ್‌ನಲ್ಲಿ ೫೦ ಮಂದಿ ಆರ್ಬಿಟ್ರೇಟರ್ಸ್ ಇದ್ದಾರೆ ಎಂದರೆ, ಆಲ್ಲಿ ಕೇಸುಸ್ ಸಿಕ್ಕುವುದು ೩-೪ ಜನರಿಗೆ ಮಾತ್ರ ಯಾರು ದುಡ್ಡು ಕೊಡುತ್ತಾರೆ ಅವರಿಗೆ ಕೇಸುಸ್ ಸಿಕ್ಕುತ್ತವೆಯೇ ಹೊರತು, ರೊಟೇಷನ್ ಪ್ರಕಾರ, ಎಲ್ಲಾ ವಕೀಲರಿಗೆ ಎಂದರೆ ಆರ್ಬಿಟ್ರೇಟರ್ಸ್‌ಗೆ ಸಿಕ್ಕುವುದಿಲ್ಲ. ಅದರ ಸಲುವಾಗಿ ಒಂದು ಸಲಹೆ. ಇದರ ಬಗ್ಗೆ ತಾವು ಹೇಳಿಕೆ ಕೊಡಬೇಕು. ಅದೇನೆಂದರೆ ಪ್ರತಿ ಯೊಂದು ತಾಲ್ಲೂಕುಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಇರತಕ್ಕ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸರ್ ಮತ್ತು ಬಾರ್ ಅಸೋಸಿಯೇಷನ್ ಅಧ್ಯಕ್ಷರು, ಸೆಕ್ರೆಟರಿ ಏನಿರುತ್ತಾರೆ. ಅವರೊಂದಿಗೆ ಸಮಾಲೋಚನೆ ಮಾಡಿ, ಅದರ ಪ್ರಕಾರ ಕೇಸುಸ್ ಪಂಚಿತಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಅವರು ಕೇಳಿದಂಥ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ ಎಂದು ಭಾವಿಸಿದ್ದೇನೆ. ಮತ್ತೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರಗಳ ಬಗ್ಗೆ ನಾನು ಬಿಜಾಪುರಕ್ಕೆ ಹೋದಾಗ, ಅಲ್ಲಿನ ವಕೀಲರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಕೇಸುಸ್‌ಗಳನ್ನು ವಕೀಲರಿಗೆ ಕೊಡುವಾಗ, ಏನಾದರೂ ಅನ್ಯಾಯವಾದರೆ, ಅದನ್ನು ಸರಿಪಡಿಸುವುದಕ್ಕೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ತಪ್ಪು ಸೂಚನೆ ಪ್ರಕಾರ, ಎಷ್ಟು ಜನರು ಆರ್ಬಿಟ್ರೇಟರ್ಸ್ ಇರುತ್ತಾರೆ, ಒಂದೇ ಸೊತ್ತು, ಒಂದೇ ಸಂಖ್ಯೆಯ ವಾದವಿವಾದಗಳು ಹೋಗಿ ಅಂಥ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಒಂದು ಪಕ್ಷ ಯಾವುದೇ ರೀತಿಯಲ್ಲಿ ಅನ್ಯಾಯವಾದರೆ, ಭ್ರಷ್ಟಾಚಾರ ಇದೆಯೆಂಬುದನ್ನು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೊಂದು ಮಾತು ಹೇಳಿದ್ದಾರೆ. ಯಾರು ದುಡ್ಡು ಕೊಡುತ್ತಾರೋ ಅವರಿಗೆ ಮಾತ್ರ ಕೇಸುಸ್ ಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಖಂಡಿತವಾಗಿಯೂ ಇಂತಹ ಆರೋಪಗಳನ್ನು ಬರೆದು ಕಳುಹಿಸಿದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ನಮ್ಮ ವಕೀಲವೃಂದ ದವರೂ ಹಣ ಕೊಟ್ಟು ಕೇಸುಸ್ ತೆಗೆದುಕೊಳ್ಳುವುದಕ್ಕೆ ಹೋದರೆ. ಇದು ಬಹಳ ದುರಾವೃಷ್ಟಕರ ಎಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಇದಿನಬ್ಬ ಅವರೇ. ನಿಮ್ಮ ಪ್ರಶ್ನೆ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ವರ್ಗಾವಣೆಯಾಗಿದೆ. ಅವರು ನಿಮಗೆ ಉತ್ತರ ಕೊಡುತ್ತಾರೆ. ಅವರಿಂದ ನಿಮಗೆ ಉತ್ತರ ತರಿಸಿಕೊಡುತ್ತೇನೆ. ಈಗ ಕೆ. ಕುಶಾಲ ಅವರು. ಪ್ರಶ್ನೆ ೯೦೭(೨೬೫೪) ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಸದಸ್ಯರು, ಖಾಸಗಿ ಸಹಕಾರಿ ಸಂಘ ಎಂದು ಕೇಳಿದ್ದಾರೆ. ಇದಕ್ಕೆ ನಾನು ಯಾವರೀತಿ ಉತ್ತರ ಕೊಡಬೇಕು. ಅದಕ್ಕೋಸ್ಕರ ತಪ್ಪು ಮುಖಾಂತರ ಈಗಾಗಲೇ ಕೇಳಿದ್ದೇನೆ, ನನಗೆ ಅವರು ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೆ ಅವರಿಗೆ ಬೇಕಾದಂಥ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿಯಿರುವ ಗ್ರಾಮಕರಣಿಕರ ಹುದ್ದೆಗಳು

೯೦೭ (೨೬೧೮) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಖಾಲಿ ಗ್ರಾಮ ಕರಣಿಕರ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು),—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦೩ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿದ್ದರೂ ಇತ್ತೀಚಿನ ಸರ್ಕಾರಿ ಆದೇಶ : ಆರ್‌ಡಿ ೧೯೦ ಬಿಎಸ್‌ಸಿ ೮೭, ದಿನಾಂಕ ೨೫-೪-೧೯೮೮ರಲ್ಲಿ ಮಂಡಲ ಪಂಚಾಯಿತಿಗಳ ರಚನೆಗಳ ತತ್ಪರಿಣಾಮವಾಗಿ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೧೪೧ ಗ್ರಾಮಲೆಕ್ಕಿಗರ ಹುದ್ದೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕಡಿಮೆಗೊಳಿಸಲಾಗಿದೆ. ಆದುದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿರುವುದಿಲ್ಲ.